# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 20.02.2021 ರಂದು ಸಂಜೆ: 04:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| | ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು. |
| 3. | ಶ್ರೀ ಹನುಮಂತರಾಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ/ಯೋಜನಾ ವಿಭಾಗ. |
| 4. | ಶ್ರೀ ಎಸ್.ವಿ.ವಾಸು, (ಎ.ಎಸ್.ಐ) ಹೆಚ್.ಎಸ್.ಆರ್ ಪೋಲಿಸ್ ಠಾಣೆ |
| 5. | ಶ್ರೀ ಜಗದೀಶ.ಎಸ್, (ಎ.ಎಸ್.ಐ) ಸಂಚಾರಿ ಪೋಲಿಸ್ ಠಾಣೆ, ಇಬ್ಬಲೂರು |
| 6. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 7. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 8. | ಶ್ರೀ ರಮೇಶ್ ಡಿ, ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ವಲಯ |
| 9. | ಶ್ರೀಮತಿ ಸತ್ಯವಾಣಿ, ಕಿರಿಯ ಆರೋಗ್ಯ ಪರಿವೀಕ್ಷಕರು |
| 10. | ಶ್ರೀ ಅರುಣ ಕೆ ದೇಸಾಯಿ, ಹಿರಿಯ ಪಶುವೈದ್ಯಾಕಿಯ ಪರಿವೀಕ್ಷಕರು, (ಪಶುಪಾಲನಾ ಇಲಾಖೆ) |
| 11. | ಶ್ರೀ ಚಂದ್ರಶೇಖರ ಹೆಚ್.ಇ. ಆರ್.ಡಬ್ಲ್ಯೂ.ಎ/ ಸದಸ್ಯರು |
| 12. | ಶ್ರೀ ಬಿ.ಎಸ್.ಆರ್ ರೆಡ್ಡಿ ಆರ್.ಡಬ್ಲ್ಯೂ.ಎ/ಸದಸ್ಯರು |
| 13. | ಶ್ರೀ ರಾಮಚಂದ್ರ, ಆರ್.ಡಬ್ಲ್ಯೂ.ಎ/ಸದಸ್ಯರು |
| 14. | ಶ್ರೀ ರವಿ ಬಿ, ಆರ್.ಡಬ್ಲ್ಯೂ.ಎ/ಸದಸ್ಯರು |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ, ಘನತ್ಯಾಜ್ಯ ನಿರ್ವಹಣೆ, ತೋಟಗಾರಿಕೆ, ವಿದ್ಯುತ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬೆಸ್ಕಾಂ ಹಾಗೂ ಇಂಜಿಯರಿಂಗ್ ಎಲ್ಲಾ ಇಲಾಖೆಯು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಹಾಗೂ ಸಾರ್ವಜನಿಕರ ದೂರುಗಳಿಗೆ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ.ಸಂ | ಇಲಾಖೆ | ವಿಷಯ |
| --- | --- | --- |
| 1 | ಪೋಲಿಸ್ ಇಲಾಖೆ | ವಾರ್ಡ್ ವ್ಯಾಪ್ತಿಯಲ್ಲಿ ಹಿರಿಯ ನಾಗರೀಕರಿಂದ / ಮಹಿಳೆಯರಿಂದ ಕೆಲವು ದುಷ್ಕರ್ಮಿಗಳು ಮೊಬೈಲ್ / ಚೈನ್ ಸ್ನಾಚಿಂಗ್ ಕಳತನವು ಹೆಚ್ಚಾಗುತ್ತಿದ್ದು, ಕಳತನವನ್ನು ತಡೆಗಟ್ಟಲು ಪೋಲಿಸ್ ಸಿಬ್ಬಂದಿ ರವರನ್ನು ನೇಮಿಸಿ ಗಸ್ತು ತಿರುಗಿಸಿ ಕಳ್ಳರನ್ನು ಹಿಡಿಯಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕರಿಗಳಿಗೆ ಸೂಚಿಸಿರುತ್ತಾರೆ.<br>**ಕ್ರಮ : ಪೋಲಿಸ್ ಇನ್ಸಪೆಕ್ಟರ್, ಹೆಚ್.ಎಸ್.ಆರ್ ಪೋಲಿಸ್ ಠಾಣೆ** |
| 2 | ಸಂಚಾರಿ ಪೋಲಿಸ್ ಇಲಾಖೆ | ವಾರ್ಡ್ ವ್ಯಾಪ್ತಿಯ ಪ್ರಮುಖ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಮಳಿಗೆಗಳನ್ನು ತೆರವುಗೊಳಿಸಲು ಬಿ.ಬಿ.ಎಂ.ಪಿ ರವರೊಂದಿಗೆ ಸಹಕರಿಸಲು ವಾರ್ಡ್ ಸಭೆಯಲ್ಲಿ ನಿರ್ಣಯವಾಯಿತು.<br>• ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರದ Notification ಪ್ರದೇಶವಲ್ಲದ ಸ್ಥಳದಲ್ಲಿ Barcading ಅಳವಡಿಸಿರುವುದನ್ನ ತೆರವುಗೊಳಿಸಲು ವಾರ್ಡ್ ಸದ್ಯಸರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ರಸ್ತೆಯಲ್ಲಿ 500 ಮೀ ದೂರದಲ್ಲಿ ಸಾರ್ವಜನಿಕರಿಗೆ ಕಾಣುವ ಹಾಗೆ Parking Board ವ್ಯವಸ್ಥೆ ಮಾಡಿಸಲು ವಾರ್ಡ್ ಸದ್ಯಸರು ಕೋರಿರುತ್ತಾರೆ ಹಾಗೂ No ಪಾರ್ಕಿಂಗ್ ಮತ್ತು ಪಾದಚಾರಿ ಮಾರ್ಗದಲ್ಲಿ ವಾಹನವನ್ನು ನಿಲುಗಡೆ ಮಾಡಿರುರುವರಿಗೆ 10 ನಿಮಿಷ Announce ಮಾಡಿ ವಾಹನವನ್ನು ಸೆಸ್ ಮಾಡಲು ವಾರ್ಡ್ ಸದ್ಯಸರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ವಸತಿ ಪ್ರದೇಶದಲ್ಲಿ ಸಾರ್ವಜನಿಕರು ಹಾಗೂ ಸಾವರರು ಹೆಲ್ಮೆಟ್ ಇಲ್ಲದೇ ಓಡಾಡುತ್ತಿದ್ದು, ಪೋಲಿಸ್ ಸಿಬ್ಬಂದಿ ರವರನ್ನು ನೇಮಿಸಿ ಎಚ್ಚರಿಕೆ ನೀಡಿ ದಂಡ ವಿಧಿಸಲು ವಾರ್ಡ್ ಸದ್ಯಸರು ಕೋರಿರುತ್ತಾರೆ<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಪೋಲಿಸ್ ಇನ್ಸಪೆಕ್ಟರ್, ಸಂಚಾರಿ ಪೋಲಿಸ್ ಠಾಣೆ.** |
| 3 | ಕಾಮಗಾರಿ ಇಲಾಖೆ | • ವಾರ್ಡ್ ವ್ಯಾಪ್ತಿಯ ರಾಜೀವಾಗಾಂಧಿ ನಗರ (ಗೊಂಡ್‌ತೋಪ್), 18ನೇ ಅಡ್ಡ ರಸ್ತೆ ಹಾಗೂ ಸೆಂಟ್ ಜೋಸ್‌ಫ್ ಶಾಲೆಯ ಹಿಂಭಾಗದ ರಸ್ತೆಯಲ್ಲಿ ಹೊಸದಾಗಿ ಚರಂಡಿ ಕಲ್ವರ್ಟ್ ಮತ್ತು ಡಾಂಬರೀಕರಣ ಕಾಮಗಾರಿ ನಿರ್ವಹಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿದ್ದು, ಕಾರ್ಯದೇಶ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಸ.ಅ. ರವರು ತಿಳಿಸಿದರು.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ವಾರ್ಡ್ ನಂ. 174** |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car